

# ರಾಜರೀತಿಯ ಅನನ್ಯ ರೈಲು

**ಪ್ರವೀಣ ಕುಲಕರ್ಣಿ**

ಇಂತಹ ರೈಲನ್ನು ನೀವು ಎಲ್ಲಿಯೂ ನೋಡಿರಲು ಸಾಧ್ಯವಿಲ್ಲ. ನಮ್ಮಲ್ಲಿ 'ಪ್ಯಾಲೇಸ್ ಆನ್ ವ್ಹೀಲ್ಸ್' ತರದ ವೈಭೋಗದ ರೈಲು ಓಡಾಡುವುದಾದರೂ ಈ ರೈಲು ಹಲವು ವಿಷಯಗಳಲ್ಲಿ ಅದಕ್ಕಿಂತ ಭಿನ್ನ. ಗಾಢ ಹಸಿರುಬಣ್ಣದ ಈ ರೈಲು ಸಂಪೂರ್ಣ ಬುಲೆಟ್‌ಪ್ರೂಫ್. ಆದರೆ, ಹೊರಗೆ ಒಂದು ಕಡ್ಡಿ ಅಲ್ಲಾಡಿದರೂ ಸ್ಪಷ್ಟವಾಗಿ ಕಾಣುವಂತಹ ಕಿಟಕಿ ಗಾಜುಗಳನ್ನು ಹೊಂದಿದೆ. ಜಗತ್ತಿನ ಅತ್ಯಂತ ದುಬಾರಿ ಮದ್ಯದ ಸಂಗ್ರಹವೇ ಇದರಲ್ಲಿ ಇರುತ್ತದೆ. ಇಷ್ಟೆಲ್ಲ ಹೇಳಿದ ಮೇಲೆ ಯಾವುದು ಈ ರೈಲು ಎಂಬ ಕುತೂಹಲ ಹೆಚ್ಚುತ್ತಿದೆಯೇ? ಉತ್ತರ ಕೊರಿಯಾದ ಪ್ರಶ್ನಾತೀತ ನಾಯಕ ಕಿಮ್ ಜಂಗ್ ಉನ್ ಅವರ ದೀರ್ಘಪ್ರಯಾಣದ ಸಾಧನವಿದು.

ಕಿಮ್ ಜಂಗ್ ಉನ್ ಅವರಿಗೆ ಮಾತ್ರವಲ್ಲ, ಅವರ ತಂದೆ ಮತ್ತು ಅಜ್ಜನಿಗೂ ರೈಲೇ ನೆಚ್ಚಿನ ಸಾರಿಗೆ ಸಾಧನವಾಗಿತ್ತು. ದೇಶದ ಒಂದು ತುದಿಯಿಂದ ಮತ್ತೊಂದು ತುದಿಗೆ, ನೆರೆಯ ದೇಶಗಳಿಗೆ ಪ್ರಯಾಣ ಮಾಡಲು ಅವರು ರೈಲನ್ನೇ ಬಳಸುತ್ತಿದ್ದರು. ಈಗ ಕಿಮ್ ಕೂಡ ರೈಲನ್ನೇ ಏರುತ್ತಿದ್ದಾರೆ. ಮೊನ್ನೆ ಮೊನ್ನೆಯಷ್ಟೇ ರಷ್ಯಾ ಅಧ್ಯಕ್ಷರನ್ನು ಭೇಟಿ ಮಾಡಲು ಅವರು ಮತ್ತೆ ಇದೇ ಸಾಧನವನ್ನು ಬಳಸಿದ್ದರಿಂದ ಹಸಿರುಬಣ್ಣದ ರೈಲು ಈಗ ಜಗತ್ತಿನ ಮುಂದೆ ಸೆಲೆಬ್ರಿಟಿಯಂತೆ ಕಂಗೊಳಿಸುತ್ತಿದೆ.

ಉತ್ತರ ಕೊರಿಯಾದ ನಾಯಕರಿಗೆ ಪ್ರಯಾಣ ಮಾಡಲು ರೈಲು ತುಂಬಾ ಸುರಕ್ಷಿತ ಸಾಧನವಾಗಿ ಕಂಡಿದೆ. ಆ ದೇಶದ ವಿಮಾನಯಾನ ಹಲವು ಅಪಘಾತಗಳಿಗೆ ಕುಖ್ಯಾತಿ ಪಡೆದಿರುವುದು ಕೂಡ ಇದಕ್ಕೆ ಕಾರಣವಾಗಿರಬೇಕು. ಕಿಮ್ ಪಾಲಿಗೆ ವಿಮಾನಯಾನ ಕಟ್ಟಕಡೆಯ ಆಯ್ಕೆಯಾಗಿದೆ. ಕಿಮ್ ಅವರ ರೈಲಿನಲ್ಲಿ ಜಗತ್ತಿನ ಎಲ್ಲ ವೈಭೋಗವೂ ಕಾಲು ಮುರಿದುಕೊಂಡು ಬಿದ್ದಿರುವ ಕುರಿತು ಹಲವು ಕಥೆಗಳು ಹರಿದಾಡುತ್ತಿವೆ. ಈ ರೈಲಿನಲ್ಲಿ ಸಿಗುವಂತಹ ಊಟ ಮತ್ತೆ ಯಾವ ಸಾರಿಗೆ ಸಾಧನದಲ್ಲೂ ಸಿಗುವುದಿಲ್ಲ ಎಂದು ಪತ್ರಿಕಾ ವರದಿಗಳು ಅಭಿಪ್ರಾಯಪಟ್ಟಿವೆ.

ಅಂದಹಾಗೆ, ಕಿಮ್ ಅವರ ರೈಲು ನಿಧಾನಗತಿಯ ಪ್ರಯಾಣಕ್ಕೆ ಹೆಸರುವಾಸಿ. ಪ್ಯಾಂಗ್‌ಯಾಂಗ್‌ನಿಂದ 680 ಕಿ.ಮೀ. ದೂರದ ರಷ್ಯಾ ಗಡಿ ತಲುಪಲು ಈ ರೈಲು ತೆಗೆದುಕೊಂಡ ಅವಧಿ ಬರೊಬ್ಬರಿ 20 ಗಂಟೆ. ಸುರಕ್ಷತೆಯ ಕಾರಣಕ್ಕಾಗಿ ಈ ರೈಲು ನಿಧಾನವಾಗಿ ಸಂಚರಿಸಿದರೂ ಎಲ್ಲ ಅತ್ಯಾಧುನಿಕ ಸೌಲಭ್ಯಗಳು ಇದರಲ್ಲಿವೆ. ಸಂವಹನ ಸಾಧನಗಳು, ಗ್ಯಾಜೆಟ್‌ಗಳನ್ನು ಒಳಗೊಂಡ ಕಿಮ್ ಅವರ ಸಂಚರಿಸುವ ಕಚೇರಿ ಸದಾಕಾಲ ಬ್ಯುಸಿಯಾಗಿರುತ್ತದೆ. ಟಿ.ವಿ ಮಾನಿಟರ್ ಅಳವಡಿಸಲಾಗಿದೆ. ಕಿಮ್ ಅವರ ಬುಲೆಟ್‌ಪ್ರೂಫ್ ಮರ್ಸಿಡೆಸ್ ಬೆಂಜ್ ಕಾರನ್ನು ಜತೆಗೆ ಒಯ್ಯಲೆಂದೇ ಬೋಗಿಯ ಒಂದು ಕಂಪಾರ್ಟ್‌ಮೆಂಟ್‌ಅನ್ನು ಮೀಸಲಿಡಲಾಗಿದೆ. ಕಿಮ್ ಅವರಿಗೆ ಮೀಸಲಾಗಿರುವ ಬೋಗಿಯ ಅಡಿಯಿಂದ ಮುಡಿವರೆಗೆ ಪ್ರತಿಯೊಂದು ಭಾಗವೂ ಉಕ್ಕಿನ ಪ್ಲೇಟ್‌ಗಳಿಂದ ಆವೃತವಾಗಿವೆ. ಸ್ಫೋಟದಂತಹ ಘಟನೆಗಳಿಂದ ರಕ್ಷಣೆಗೆ ಇದರಿಂದ ಸಾಧ್ಯವಾಗಲಿದೆ. ಕಿಮ್ ಅವರು ಸಭೆ ನಡೆಸಲು ಅನುಕೂಲವಾಗಲೆಂದು ಒಂದು ಬೋಗಿಯನ್ನು ಸಭಾಂಗಣವಾಗಿ ಪರಿವರ್ತಿಸಲಾಗಿದೆ. ಅಲ್ಲಿ ಗುಲಾಬಿ ಮತ್ತು ನೀಲಿ ಬಣ್ಣದ ಕುರ್ಚಿಗಳನ್ನು ಹಾಕಲಾಗಿದೆ. ಕಿಮ್ ಅವರ ದೊಡ್ಡ ಪರಿವಾರವೇ ಅವರೊಂದಿಗೆ ಪ್ರಯಾಣ ಮಾಡುವುದರಿಂದ ಅಧಿಕಾರಿಗಳಿಗೆ ತಕ್ಕಂತೆ ಬೋಗಿಯಲ್ಲಿ ಸೌಲಭ್ಯ ಕಲ್ಪಿಸಲಾಗಿದೆ. ನಾಲ್ಕು ವರ್ಷಗಳ ಹಿಂದೆಯೂ ಕಿಮ್ ಅವರು ಪುಟಿನ್ ಅವರ ಭೇಟಿಗಾಗಿ ರೈಲಿನಲ್ಲೇ ಪ್ರಯಾಣ ಮಾಡಿದ್ದರು. ಅದಕ್ಕಿಂತ ಮೊದಲು, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ವಿಯಟ್ನಾಂನ ಹನೊಯಿಯಲ್ಲಿ ಭೇಟಿಯಾಗಲು 60 ಗಂಟೆಗಳ ರೈಲು ಪ್ರಯಾಣವನ್ನು ಅವರು ಮಾಡಿದ್ದರು. ಆದರೆ, ಸಿಂಗಪುರದಲ್ಲಿ ಮೊದಲ ಸಲ ಟ್ರಂಪ್ ಅವರನ್ನು ಭೇಟಿಯಾಗುವ ಸಂದರ್ಭದಲ್ಲಿ ಮಾತ್ರ ಚೀನಾ ಒದಗಿಸಿದ್ದ ಬೋಯಿಂಗ್ 747 ವಿಮಾನದಲ್ಲಿ ಹೋಗಿದ್ದರು.

ಕಿಮ್ ಅವರ ರೈಲು ಸವಾರಿಯಲ್ಲಿ ಮೂರು ರೈಲುಗಳು ಇರುತ್ತವೆ. ಒಟ್ಟಾರೆ 90 ಬೋಗಿಗಳನ್ನು ಈ ರೈಲುಗಳು ಹೊಂದಿರುತ್ತವೆ. ಮಧ್ಯದಲ್ಲಿ ಕಿಮ್ ಪ್ರಯಾಣಿಸುವ ರೈಲಿದ್ದರೆ, ಮುಂದೆ ಒಂದು, ಹಿಂದೆ ಮತ್ತೊಂದು ರೈಲು ಅದರ ಬೆಂಗಾವಲಿಗೆ ಇರುತ್ತವೆ. ಕಿಮ್ ಅವರ ರೈಲಿನಲ್ಲಿ ಎಂತಹ ವೈಭೋಗ ಇರುತ್ತದೆ? ಅವರ ತಂದೆ ಕಿಮ್ ಜಂಗ್ –II ಅವರೊಮ್ಮೆ ರಷ್ಯಾದ ಅಧಿಕಾರಿ ಕಾನ್‌ಸ್ಟಾಂಟಿನ್ ಪುಲಿಕೊವಿಸ್ಕಿ ಅವರಿಗೆ ಈ ರೈಲಿನಲ್ಲಿ ಪ್ರಯಾಣಿಸುವ ಅವಕಾಶವನ್ನು ಕಲ್ಪಿಸಿದ್ದರು. ಪ್ರಯಾಣದ ಅನುಭವವನ್ನು ಅವರು ದಾಖಲಿಸಿದ್ದಾರೆ. 'ಫ್ರೆಂಚ್ ವೈನ್ ಮತ್ತು ಜಿಹ್ವಾಚಪಲ ತಣಿಸುವಂತಹ ಖಾದ್ಯಗಳ ಸಮಾರಾಧನೆಯ ಜತೆಗೆ ಸುಂದರ ಯುವತಿಯರ ನರ್ತನವು ಪ್ರಯಾಣಕ್ಕೆ ಕಳೆಕಟ್ಟಿತ್ತು. ಎಂದಿಗೂ ಮರೆಯಲಾಗದ ಯಾನ ಅದಾಗಿತ್ತು' ಎಂದು ಪುಲಿಕೊವಿಸ್ಕಿ ಬರೆದಿದ್ದಾರೆ.

ಕಿಮ್ ಜತೆ ಹೀಗೆ ರೈಲಿನಲ್ಲಿ ಪ್ರಯಾಣ ಮಾಡಿದವರು ಕಡಿಮೆ. ಒಳಗಿನ ವಾತಾವರಣವನ್ನು ನೋಡಿದವರ ಸಂಖ್ಯೆಯೂ ಕಡಿಮೆ. ಈ ರೈಲು ವಿಶ್ರಾಂತಿ ಪಡೆಯುವಾಗ ಕಿಮ್ ಸಿಗರೇಟು ಹೊಗೆ ಬಿಡುವುದನ್ನು ಮಾತ್ರ ಕೆಲವರು ಕಿಟಕಿಯಿಂದ ನೋಡಿದ್ದಾರೆ. ಎಲ್ಲೆಲ್ಲಿ ಈ ರೈಲು ಹೋಗುವುದೋ ಅಲ್ಲಲ್ಲಿ ಅದಕ್ಕೆ ರಾಜವೈಭೋಗದ ಸ್ವಾಗತ ಸಿಗುತ್ತದೆ. ನಿಂತ ನಿಲ್ದಾಣದಲ್ಲಿ ಅದನ್ನು ಸೈನಿಕರ ದೊಡ್ಡಪಡೆಯೇ ಪಹರೆ ಕಾಯುತ್ತದೆ. ಉಳಿದ ಯಾವ ರೈಲುಗಳಿಗೂ ಆ ಮಾರ್ಗದಲ್ಲಿ ಪ್ರಯಾಣಕ್ಕೆ ಅವಕಾಶ ಇರುವುದಿಲ್ಲ. ಅಬ್ಬಾ, ಅಧ್ಯಕ್ಷರ ರೈಲೇ!

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65